# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)

ನಿಗಮ ಕಛೇರಿ, ನಂ 29,
ಕಾವೇರಿ ಗ್ರಾಮೀಣ ಬ್ಯಾಂಕ್ ರಸ್ತೆ,
2ನೇ ಹಂತ ವಿಜಯನಗರ
ಮೈಸೂರು–570017.
Website : www.cescmysore.org
CIN : 40109KA2004SGC035177

ಸಹಾಯಕ ಕಾರ್ಯ ನಿರ್ವಾಹಕಇಂಜಿನಿಯರ್(ವಿ),
ನ.ರಾ.ಮೊಹಲ್ಲಾ, ಉಪ-ವಿಭಾಗ,
ಚಾ.ವಿ.ಸ.ನಿ.ನಿ., ಮೈಸೂರು.
ಕಛೇರಿ ಸಂಖ್ಯೆ : 0821-2456201
ಮೊಬೈಲ್ : 9448994742

ಕ್ರಮ.ಸಂಖ್ಯೆ :ಸಕಾಇಂ(ವಿ)/ಸಇಂ(ತಾ)/ನರಾಮೊ/19-20/ 463-68 ದಿನಾಂಕ : 29.04.2019

ಲಗತ್ತು :

## ಜನ ಸಂಪರ್ಕ ಸಭೆ ನಡಾವಳಿ

ದಿನಾಂಕ 26.04.2019 ರಂದು ಬೆಳಿಗ್ಗೆ 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಕಾ ಮತ್ತು ಪಾ ವೃತ್ತ, ಮೈಸೂರುರವರ ಅಧ್ಯಕ್ಷತೆಯಲ್ಲಿ ಎನ್.ಆರ್.ಮೊಹಲ್ಲಾ ಉಪ-ವಿಭಾಗದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು / ನೌಕರರುಗಳು.**

1. ಶ್ರೀ. ಸ್ವಾಮಿ.ಹೆಚ್.ಎಸ್, ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಚಾವಿಸನಿನಿ, ಎನ್.ಆರ್.ಮೊಹಲ್ಲಾ ವಿಭಾಗ,
2. ಶ್ರೀಮತಿ, ಹೇಮಾವತಿ. ಎಂ.ಕೆ, ಸಹಾಯಕ ಇಂಜಿನಿಯರ್(ತಾಂ),ಎನ್.ಆರ್.ಮೊಹಲ್ಲಾ ಉಪವಿಭಾಗ.
3. ಶ್ರೀ ವಿಶ್ವಾಸ್, ಸಹಾಯಕ ಇಂಜಿನಿಯರ್(ವಿ),ನ.ರಾ.ಮೊಹಲ್ಲಾ ಶಾಖೆ.
4. ಶ್ರೀ ವಿನೋದ್ ಕುಮಾರ್, ಸಹಾಯಕ ಇಂಜಿನಿಯರ್(ವಿ), ಬನ್ನಿಮಂಟಪ ಶಾಖೆ.
5. ಶ್ರೀ ವೈ.ಸಿ.ನಿತೇಶ್, ಸಹಾಯಕ ಇಂಜಿನಿಯರ್(ವಿ), ಸಿದ್ದಲಿಂಗಪುರ ಶಾಖೆ
6. ಶ್ರೀಮತಿ ಸುನೀತ, ಕಿರಿಯ ಇಂಜಿನಿಯರ್(ವಿ),ನ.ರಾ.ಮೊಹಲ್ಲಾ ಶಾಖೆ.
7. ಶ್ರಿ ರಾಚಯ್ಯ, ಕಿರಿಯ ಇಂಜಿನಿಯರ್(ವಿ), ಬನ್ನಿಮಂಟಪ ಶಾಖೆ.
8. ಶ್ರೀ ನಾಗೇಂದ್ರ ಪ್ರಸಾದ್, ಸಹಾಯಕ ಲೆಕ್ಕಾಧಿಕಾರಿ,ಎನ್.ಆರ್.ಮೊಹಲ್ಲಾ ಉಪವಿಭಾಗ.

ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎನ್.ಆರ್.ಮೊಹಲ್ಲಾ ವಿಭಾಗ ರವರು ಸಭೆಗೆ ಹಾಜರಿದ್ದ ಅಧಿಕಾರಿ/ ನೌಕರರು ಮತ್ತು ವಿದ್ಯುತ್ ಗ್ರಾಹಕರುಗಳನ್ನು ಸಭೆಗೆ ಸ್ವಾಗತಿಸಿದರು.

**ಕೆಳೆದ ತ್ರೈಮಾಸಿಕ ಜನ ಸಂಪರ್ಕ ಸಭೆಯಲ್ಲಿ ನೊಂದಾವಣೆ ಮಾಡಲಾಗಿದ್ದ, ವಿದ್ಯುತ್ ಗ್ರಾಹಕರ ದೂರುಗಳನ್ನು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎನ್.ಆರ್.ಮೊಹಲ್ಲಾ ವಿಭಾಗ ರವರು ಪರಿಶೀಲಿಸಿದರು.**

**ವಿವರಗಳು:-**

1. ಶ್ರೀ ವಿಜೇಂದ್ರ ರೈತ ಸಂಘದ ಕಾರ್ಯದರ್ಶಿ, ಕಳಸ್ತವಾಡಿ ರವರ ಸ್ಥಾವರ ಸಂಖ್ಯೆ ಎನ್.ಎಸ್.ಎಲ್42382 ಸ್ಥಾವರದಲ್ಲಿ ಬಳಕೆ ಕಡಿಮೆ ಇದ್ದರು ಬಿ.ಎಂ.ಡಿ ಅಧಿಕವಾಗಿದ್ದು, ವಿದ್ಯುತ್ ಬಿಲ್ ಹೆಚ್ಚಾಗಿ ಬರುತ್ತಿದೆ ಎಂಬ ದೂರಿಗೆ ಸಂಬಂಧಿಸಿದಂತೆ ಸರಿಪಡಿಸಲಾಗಿರುವ ಬಿಲ್ಲಿನ ವಿವರವನ್ನು ಪರಿಶೀಲಿಸಿದರು.
2. ಕಳಸ್ತವಾಡಿ - ನಾಗನಹಳ್ಳಿ ರಸ್ತೆ ಬಳಿ ಕುಡಿಯುವ ನೀರಿಗೆ ಒದಗಿಸಿರುವ ಪರಿವರ್ತಕದಿಂದ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆಯುವ ಮುನ್ಸೂಚನೆಗಳಿಗೆ ಕೈಗೊಂಡಿರುವ ಕ್ರಮವನ್ನು ಪರಿಶೀಲಿಸಿದರು.

3. ಎಲ್.ಇ.ಡಿ ಬಲ್ಪ್ ಮತ್ತು ಸೋಲಾರ್ ಉಪಕರಣ ಬಳಕೆಗಳಿಂದ ಗ್ರಾಹಕರಿಗೆ ಸಿಗುವ ರಿಬೇಟ್‌ಗಳ ಬಗ್ಗೆ ಮಾಹಿತಿಯನ್ನು ಉಪವಿಭಾಗ/ಶಾಖಾ ಕಛೇರಿಯ ಆವರಣಗಳಲ್ಲಿ ಜಾಹಿರಾತಿನ ಫಲಕಗಳನ್ನು ಹಾಕಲಾಗಿರುವ ಬಗ್ಗೆ ಪರಿಶೀಲಿಸಿದರು.

**ಸಭೆಗೆ ಹಾಜರಾಗಿದ್ದ ಗ್ರಾಹಕರುಗಳ ವಿವರ ಹಾಗೂ ಸದರಿರವರು ನೀಡಿರುವ ದೂರು/ಸಲಹೆಗಳ ವಿವರ**

1. ಶ್ರೀ ನಸುರುಲ್ಲಾ ಖಾನ್, ಆ್ಯಸ್‌ಫ್ಯೆಯರ್ ಡಿಲೈಟ್ಸ್, ಸುಭಾಷ್‌ನಗರ, ಮೈಸೂರು.
2. ಮೆ॥ ರೈನೋ ಪಾಲಿಪೇಟ್, ಬನ್ನಿಮಂಟಪ, ಮೈಸೂರು.

1. ಶ್ರೀ ನಸುರುಲ್ಲಾ ಖಾನ್, ಆ್ಯಸ್‌ಫ್ಯೆಯರ್ ಡಿಲೈಟ್ಸ್, ಸುಭಾಷ್‌ನಗರ, ಮೈಸೂರುರವರು ಚಾವಿಸನಿನಿ ಕಾರ್ಯವೈಖರಿಗಳನ್ನು ಹೆಚ್ಚಿಸಲು ಕೆಲವೊಂದು ಸಲಹೆಗಳನ್ನು ನೀಡಿದರು.
    - ಗ್ರಾಹಕರು ಬಿಲ್ಲುಗಳನ್ನು ಪಾವತಿಸಲು ಶಾಖಾ ಕಚೇರಿಯ ಕೌಂಟರ್‌ಗಳಲ್ಲಿ ಶಡ್ ವ್ಯವಸ್ಥೆ ಮಾಡುವಂತೆ ಕೋರಿರುತ್ತಾರೆ.
    - ಸಮಾಜ ಸೇವಕರುಗಳನ್ನು ಉಪವಿಭಾಗದ ಸಿ.ಯು.ಜಿ what's app ಗುಂಪಿನಲ್ಲಿ ಸೇರ್ಪಡಿಸಿ ವಿದ್ಯುತ್ ಅಡಚಣೆಯ ವಿವರಗಳನ್ನು ನೀಡುವಂತೆ ಕೋರಿರುತ್ತಾರೆ.

2. ಮೆ॥ ರೈನೋ ಪಾಲಿಪೇಟ್, ಬನ್ನಿಮಂಟಪ, ಮೈಸೂರುರವರ ಸ್ಥಾವರ ಸಂಖ್ಯೆ NTP1431ರ ಬಿಲ್ಲಿನಲ್ಲಿ ಎಫ್.ಸಿ. ಹೊಂದಾಣಿಕೆಯನ್ನು ಸರಿಪಡಿಸಲು ಕೋರಿರುತ್ತಾರೆ. ಈ ಬಗ್ಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸಹಾಯಕ ಲೆಕ್ಕಾಧಿಕಾರಿ, ಎನ್.ಆರ್.ಮೊಹಲ್ಲಾ ಉಪವಿಭಾಗರವರಿಗೆ ಬಿಲ್ಲನ್ನು ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

29/4/2019

**ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)**
**ಎನ್.ಆರ್.ಮೊಹಲ್ಲಾ ಉಪ-ವಿಭಾಗ**
**ಚಾ.ವಿ.ಸ.ನಿ.ನಿ. ಮೈಸೂರು.**

**ಪ್ರತಿಗಳು:-**

- ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರುರವರ ಕೃಪಾವಗಾಹನೆಗಾಗಿ ಸಲ್ಲಿಸಲಾಗಿದೆ.
- ಅಧೀಕ್ಷಕ ಇಂಜಿನಿಯರ್(ವಿ), ಚಾವಿಸನಿನಿ., ಕಾ ಮತ್ತು ಪಾ ವೃತ್ತ, ಮೈಸೂರುರವರ ಕೃಪಾವಗಾಹನೆಗಾಗಿ ಸಲ್ಲಿಸಲಾಗಿದೆ.
- ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ., ಎನ್.ಆರ್.ಮೊಹಲ್ಲಾರವರ ಕೃಪಾವಗಾಹನೆಗಾಗಿ ಸಲ್ಲಿಸಲಾಗಿದೆ.
- ಎಲ್ಲಾ ಶಾಖಾಧಿಕಾರಿಗಳು, ಎನ್.ಆರ್.ಮೊಹಲ್ಲಾ/ ಬನ್ನಿಮಂಟಪ/ ಸಿದ್ದಲಿಂಗಪುರರವರುಗಳು ಮೇಲ್ಕಂಡ ದೂರಗಳನ್ವಯ ಸ್ಥಳಪರಿಶೀಲಿಸಿ ಉಪವಿಭಾಗ ಕಚೇರಿಗೆ ವರದಿ ನೀಡುವುದು.
- ಸಹಾಯಕ ಲೆಕ್ಕಾಧಿಕಾರಿ /ಹಿರಿಯ ಸಹಾಯಕ/ ಮುಖ್ಯ ಕಡತಕ್ಕೆ/ಕ.ಪ್ರ.